ಹೊಡಿಬಡಿ ಆಟ-2024

TATA IPL

ಇಂದು ನಮಗೆ ಒಳ್ಳೆಯ ರಾತ್ರಿ ಅಲ್ಲ. ದುರಾದೃಷ್ಟವಶಾತ್ ನಮ್ಮ ಇನ್ನಿಂಗ್ಸ್‌ನಲ್ಲಿ ಕೆಲವು ವಿಕೆಟ್‌ಗಳನ್ನು ಕಳೆದುಕೊಂಡಿದ್ದೇವೆ. ನಾವು ಮೊದಲು ಬ್ಯಾಟ್ ಮಾಡಬೇಕಾಗಿತ್ತು. ಆದರೆ ಟಾಸ್ ಸೋತ ನಮೆ ಮೊದಲು ಬೌಲಿಂಗ್ ಮಾಡುವ ಅನಿವಾರ್ಯತೆ ಕಾಡಿತು. ಬ್ಯಾಟಿಂಗ್ ಸಂದರ್ಭದಲ್ಲಿ ನಮಗೆ ಆರಂಭಿಕ ಆಘಾತ ಅನುಭವವಾಯಿತು ಮತ್ತು ಗೆಲ್ಲುವ ಮೊದಲು ನಾವು ನಮ್ಮ ಪರವಾಗಿ ಕೆಲಸ ಮಾಡಬೇಕು. ನಿನ್ನೆಯ ದಿನ ಗೆಲುವು ನಮ್ಮ ಪರವಾಗಿ ಇರಲಿಲ್ಲ.

-ಪ್ಯಾಟ್ ಕಮ್ಮಿನ್ಸ್, ಹೈದ್ರಾಬಾದ್ ನಾಯಕ

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್	VS	ಮುಂಬಯಿ ಇಂಡಿಯನ್ಸ್	ದೆಹಲಿ	3:30 PM
ಲಖನೌ ಸೂಪರ್ ಜೈಂಟ್ಸ್	VS	ರಾಜಸ್ಥಾನ ರಾಯಲ್ಸ್	ಲಖನೌ	7:30 PM

ಗಾಯದ ನಡುವೆಯೂ ಮತದಾನ ಮಾಡಿದ ಶಮಿ

ಲಖನೌ: ಉತ್ತರ ಪ್ರದೇಶದ ಅಮ್ರೋಹಾ ಜಿಲ್ಲೆಯಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನದಲ್ಲಿ ವೇಗಿ ಮೊಹಮ್ಮದ್ ಶಮಿ ಗಾಯದ ನಡುವೆಯೂ ಮತ ಚಲಾಯಿಸಿದರು. ಏಕದಿನ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಮೊಹಮ್ಮದ್ ಶಮಿ, ಪಂದ್ಯಾವಳಿಯ ಸಮಯದಲ್ಲಿ ಹಿಮ್ಮಡಿ ಗಾಯದಿಂದ ಬಳಲುತ್ತಿದ್ದರು. ಇದೀಗ ಸರ್ಜರಿಗೆ ಒಳಗಾಗಿದ್ದು ಅದರ ಪುನಶ್ಚೇತನ ಕಾರ್ಯದಲ್ಲಿ ತೊಡಗಿದ್ದಾರೆ. ಈ ನಡುವೆ ಅವರು ಮತದಾನ ಮಾಡಿದ್ದಾರೆ. ಮೊಹಮ್ಮದ್ ಶಮಿ ಅವರನ್ನು ಶಸ್ತ್ರಚಿಕಿತ್ಸೆಗಾಗಿ ಯುನೈಟೆಡ್ ಕಿಂಗ್‌ಡಮ್‌ಗೆ ಕಳುಹಿಸಲಾಗಿತ್ತು. ಇದೀಗ ಹೆಚ್ಚಿನ ಪುನಶ್ಚೇತನಕ್ಕಾಗಿ ಶಮಿ ಭಾರತಕ್ಕೆ ಮರಳಿದ್ದಾರೆ. ಗಾಯವು ಗುಣವಾಗಲು ಕನಿಷ್ಠ 4-5 ತಿಂಗಳುಗಳು ಬೇಕಾಗುವುದರಿಂದ ವೇಗಿ ಮುಂಬರುವ ಟಿ20 ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ.

ಪರ್ಪಲ್ ಕ್ಯಾಪ್

13 ವಿಕೆಟ್
ಜಸ್‌ಪ್ರೀತ್ ಬೂಮ್ರಾ

ಆರೆಂಜ್ ಕ್ಯಾಪ್

430 ರನ್
ವಿರಾಟ್ ಕೊಹ್ಲಿ

ಪಂಜಾಬ್‌ಗೆ ಐತಿಹಾಸಿಕ ಗೆಲುವು

ಕ್ರಿಕೆಟ್ ಇತಿಹಾಸದಲ್ಲೇ ಅತಿ ಹೆಚ್ಚು ರನ್ ಚೇಸ್ ಮಾಡಿದ ಕಿಂಗ್ಸ್

ಕೋಲ್ಕತ್ತಾ: ಜಾನಿ ಬೈರ್ಸ್ಟೋವ್ ಹಾಗೂ ಶಶಾಂಕ್ ಶರ್ಮ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಪಂಜಾಬ್ ಕಿಂಗ್ಸ್ ಐತಿಹಾಸಿಕ ಗೆಲುವು ಸಾಧಿಸಿದೆ. ಪಂದ್ಯವನ್ನು ಬೃಹತ್ ಗುರಿ ಬೆನ್ನಟ್ಟಿ ಗೆಲ್ಲುವ ಮೂಲಕ ಕ್ರಿಕೆಟ್ ಇತಿಹಾಸದಲ್ಲಿ ದಾಖಲೆಯ ಗೆಲುವು ಸಾಧಿಸಿದೆ. ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆದ ಪಂಜಾಬ್ ಕಿಂಗ್ಸ್ ಹಾಗೂ ಕೆಕೆಆರ್ ನಡುವಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ತಂಡವು ನರೈನ್, ಸಾಲ್ಟ್ ಅವರ ಬ್ಯಾಟಿಂಗ್ ನೆರವಿನಿಂದ 6 ವಿಕೆಟ್ ಕಳೆದುಕೊಂಡು 261 ರನ್ ಗಳಿಸಿತು. ಇದನ್ನು ಬೆನ್ನಟ್ಟಿದ ಪಂಜಾಬ್ ಬೈರ್ಸ್ಟೋವ್ ಹಾಗೂ ಶಶಾಂಕ್ ಅವರ ಬ್ಯಾಟಿಂಗ್ ನೆರವಿನಿಂದ 18.4 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 262 ರನ್ ಗಳಿಸಿ ದಾಖಲೆಯ ಗೆಲುವು ದಾಖಲಿಸಿತು.

ಕೆಕೆಆರ್‌ಗೆ ನರೈನ್, ಸಾಲ್ಟ್ ಆಸರೆ

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ತಂಡಕ್ಕೆ ಫಿಲಿಪ್ ಸಾಲ್ಟ್ ಮತ್ತು ಸುನಿಲ್ ನರೈನ್ ಜೋಡಿ ಸಿಡಿಲಬ್ಬರ ಬ್ಯಾಟಿಂಗ್ ಮಾಡಿತು. ಅವರು ಮೊದಲ ವಿಕೆಟ್ 131 ರನ್‌ಗಳ ಜೊತೆಯಾಟವಾಡಿರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಸುನಿಲ್ ನರೈನ್ ಕೇವಲ 31 ಎಸೆತಗಳಲ್ಲಿ 71 ರನ್ ಪೇರಿಸಿದರು. ಈ ಹಂತದಲ್ಲಿ ಸುನಿಲ್ ನರೈನ್‌ಗೆ ಸಾಥ್ ನೀಡಿದ ಮತ್ತೊರ್ವ ಆರಂಭಿಕ ಫಿಲಿಪ್ ಸಾಲ್ಟ್ 37 ಎಸೆತಗಳಲ್ಲಿ 78 ರನ್ ಗಳಸಿದರು. ನಂತರ ಬಂದ ಆಂಡ್ರೆ ರಸೆಲ್ 24 ಔಟಾದರು. ನಾಯಕ ಶ್ರೇಯಸ್ ಅಯ್ಯರ್ ಮತ್ತು ವೆಂಕಟೇಶ್ ಅಯ್ಯರ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಶ್ರೇಯಸ್ ಅಯ್ಯರ್ (28) ನಿಲ್ಲಿಸಿದರು. ರಿಂಕು ಸಿಂಗ್ ಅವರಿಂದ ಮತ್ತೆ ಹೇಳಿಕೊಳ್ಳುವಂತ ಪ್ರದರ್ಶನ ಮೂಡಿ ಬರಲಿಲ್ಲ. ವೆಂಕಟೇಶ್ ಅಯ್ಯರ್ ಕೊನೆಯಲ್ಲಿ 39 ರನ್ ಗಳಿಸಿ ರನ್ ಔಟಾದರು. ಇತ್ತ ರಮಣದೀಪ್ ಸಿಂಗ್ 6 ರನ್ ಹೊಡೆದು ವಿಕೆಟ್ ಉಳಿಸಿಕೊಂಡರು. ಪಂಜಾಬ್ ಪರ ಅರ್ಶ್‌ದೀಪ್ ಸಿಂಗ್ 2 ವಿಕೆಟ್ ಪಡೆದರೆ, ಸ್ಯಾಮ್ ಕರ್ರಾನ್, ಹರ್ಷಲ್ ಪಟೇಲ್ ಹಾಗು ರಾಹುಲ್ ಚಹಾರ್ ಒಂದು ವಿಕೆಟ್ ತೆಗೆಯುವುದಕ್ಕೆ ಸೀಮಿತವಾದರು.

ಬೈರ್ಸ್ಟೋವ್, ಶಶಾಂಕ್ ಗೆಲುವಿನಾಟ

ಬೃಹತ್ ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೂ ಬಿರುಸಿನ ಆರಂಭ ಸಿಕ್ಕಿತು. ಆರಂಭಿಕ ಪ್ರಭ್‌ಸಿಮ್ರನ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಆರಂಭದಿಂದಲೂ ಬೀಸಾಡಿದ ಅವರು, ಕೇವಲ 20 ಎಸೆತದಲ್ಲಿ 54 ರನ್ ಗಳಿಸಿ ಪಾವರ್‌ಪ್ಲೇನ ಕೊನೆಯ ಎಸೆತದಲ್ಲಿ ರನ್‌ಔಟ್‌ಗೆ ಬಲಿಯಾದರು. ಅವರೊಂದಿಗೆ ಬ್ಯಾಟಿಂಗ್ ಮಾಡಿದ ಬೈರ್ಸ್ಟೋವ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಸುದೀರ್ಘ ಬ್ಯಾಟಿಂಗ್ ಮಾಡಿದ ಅವರು, ಪಂದ್ಯವನ್ನು ಗೆಲುವಿನ ಮಟ್ಟಿಗೆ ಆಡಿದರು. ಬಳಿಕ ಬಂದ ಶಶಾಂಕ್ ಸಿಂಗ್ ಸ್ಫೋಟಕ ಬ್ಯಾಟಿಂಗ್ ಮಾಡಿ ದರು. ಕೆಕೆಆರ್ ತಂಡದ ಬೌಲರ್‌ಗಳನ್ನು ಮನ ಬಂದಂತೆ ಬಡಿದ ಅವರು ಕೇವಲ 28 ಎಸೆತದಲ್ಲಿ 68 ರನ್‌ಗಳ ಅಮೋಘ ಆಟವಾಡಿದರು. ಆರಂಭದಿಂದಲೂ ಬೆಂಡೆತ್ತುವಂತೆ ಆಡಿದ ಬೈರ್ಸ್ಟೋವ್ ಅಜೇಯ 108 ಶತಕ ಬಾರಿಸಿ ಪಂದ್ಯವನ್ನು ಗೆಲ್ಲಿಸಿದರು.

ದಾಖಲೆಯ ಗೆಲುವು

262 ರನ್ ಚೇಸ್ ಮಾಡುವ ಮೂಲಕ ಕ್ರಿಕೆಟ್ ಲೋಕದಲ್ಲಿ ಹೊಸ ಇತಿಹಾಸ ಸೃಷ್ಟಿಸಿದೆ. ಬರೋಬ್ಬರಿ 262 ಚೇಸ್ ಮಾಡಿ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಚೇಸ್ ಮಾಡಿದ ತಂಡ ಎಂಬ ದಾಖಲೆ ಬರೆದಿದೆ. 2023ರಲ್ಲಿ ಸೌತ್ ಆಫ್ರಿಕಾ ತಂಡವು ವೆಸ್ಟ್ ಇಂಡಿಸ್ ವಿರುದ್ಧ 249 ರನ್ ಚೇಸ್ ಮಾಡಿತ್ತು ಇದುವರೆಗಿನ ದಾಖಲೆಯಾಗಿತ್ತು. ಅದರಂತೆ ಪಂದ್ಯ ಒಂದರಲ್ಲಿ ಬಾರಿಸಿದ ಅತಿ ಹೆಚ್ಚು ಸಿಕ್ಸ್ ಎಂಬ ದಾಖಲೆಗೂ ಪಂದ್ಯ ಸಾಕ್ಷಿಯಾಗಿದೆ. ಎರಡೂ ತಂಡಗಳು ಸೇರಿ ಬರೋಬ್ಬರಿ 42 ಸಿಕ್ಸ್ ಬಾರಿಸಿದ್ದು, ಪಂದ್ಯ ಒಂದರಲ್ಲಿ ಅತಿ ಹೆಚ್ಚು ಸಿಕ್ಸ್ ಕಂಡ ಪಂದ್ಯವಾಗಿದೆ.

ಸ್ಕೋರ್
ಕೆಕೆಆರ್: 261/6 ಸಾಲ್ಟ್ 75, ನರಯನ್ 71, ಅರ್ಶ್‌ದೀಪ್ 45/2
ಪಂಜಾಬ್: 262/2 ಬೈರ್ಸ್ಟೋವ್ 108, ಶಶಾಂಕ್ 68, ನರೈನ್ 24/1

ಪುಟಿದೇಳುವ ಭರದಲ್ಲಿ ಮುಂಬಯಿ

ಇಂದು ಎರಡು ಪಂದ್ಯ | ಲಖನೌಗೆ ರಾಜಸ್ಥಾನ ಸವಾಲು

ಲಖನೌ: ಟೂರ್ನಿಯ ಪ್ಲೇಆಫ್ ಹಂತಕ್ಕೆ ತಲುಪಲು ಜಟಾಪಟ್ಟಿ ನಡೆಯುತ್ತಿದ್ದು, ಈ ನಡುವೆ ಭಾರಿ ಪೈಪೋಟಿ ನಡೆಯುತ್ತಿದೆ. ಈ ನಡುವೆ ಶನಿವಾರವೂ ಎರಡು ಪಂದ್ಯಗಳನ್ನು ಆಯೋಜಿಸಲಾಗಿದೆ. ಶನಿವಾರದ ಮೊದಲನೇ ಪಂದ್ಯದಲ್ಲಿ ಡೆಲ್ಲಿಕ್ಯಾಪಿಟಲ್ಸ್ ಹಾಗೂ ಮುಂಬಯಿ ಇಂಡಿಯನ್ಸ್ ಹಣಾಹಣಿ ನಡೆಯಲಿದ್ದು, ಎರಡನೇ ಪಂದ್ಯದಲ್ಲಿ ಲಖನೌ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಮೊದಲ ಪಂದ್ಯದಲ್ಲಿ ತಂಡಗಳಿಗೆ ಗೆಲುವು ಅನಿವಾರ್ಯವಾಗಿದ್ದು, ಪಂದ್ಯ ರೋಚಕತೆಗೆ ಮಣೆ ಹಾಕಿದೆ. ಇನ್ನು ಎರಡನೇ ಪಂದ್ಯದಲ್ಲಿ ಎರಡೂ ತಂಡಗಳು ಅತ್ಯುತ್ತಮ ಫಾರ್ಮ್‌ನಲ್ಲಿದ್ದು, ಪಂದ್ಯವು ರೋಚಕ ಫಲಿತಾಂಶ ಭರವಸೆ ನೀಡುತ್ತಿದೆ.

ಮುಂಬಯಿ ಡೆಲ್ಲಿ ಹಣಾಹಣಿ

ಟೂರ್ನಿಯಲ್ಲಿ ಮೊದಲು ವಿಫಲತೆ ಅನುಭವಿಸಿದ್ದ ಡೆಲ್ಲಿ ತಂಡವು ಹೊಸ ರೇಷದೊಂದಿಗೆ ಆಡುತ್ತಿದೆ. ಬ್ಯಾಟಿಂಗ್‌ನಲ್ಲಿ ವಿಫಲವಾಗಿದ್ದ ತಂಡವು ಇದೀಗ ಮತ್ತೆ ಫಾರ್ಮ್‌ಗೆ ಬಂದಿದೆ. ವಾರ್ನರ್ ಹಾಗೂ ಪೃಥ್ವಿ ಶಾ ಅವರ ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದ ತಂಡಕ್ಕೆ ಫ್ರೇಸರ್ ಉತ್ತಮ ಆರಂಭ ನೀಡುತ್ತಿದ್ದಾರೆ. ಅವರೊಂದಿಗೆ ಅಲ್ಪ ಸಾಥ್ ಶಾ ನೀಡಿದರೂ, ಪಂತ್ ತಮ್ಮ ಹಳೆಯ ಫಾರ್ಮ್‌ಗೆ ಬಂದಿದ್ದಾರೆ. ಅಕ್ಷರ್ ಸ್ಟಬ್ಸ್ ಸಹ ಉತ್ತಮ ಲಯದಲ್ಲಿ ಇದ್ದಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಇಶಾಂತ್, ಮುಖೇಶ್ ಕುಮಾರ್, ಕುಲ್ದೀಪ್ ಉತ್ತಮ ಲಯದಲ್ಲಿ ಇದ್ದಾರೆ.

ಮುಂಬಯಿ ತಂಡದಲ್ಲಿ ಬ್ಯಾಟಿಂಗ್ ಬಲವಿದೆ. ಆರಂಭಿಕ ಕಿಶನ್, ರೋಹಿತ್ ಉತ್ತಮ ಲಯದಲ್ಲಿ ಆಡಿದರೆ. ಸೂರ್ಯಕುಮಾರ್ ಸ್ಫೋಟಕ ಬ್ಯಾಟಿಂಗ್ ಮಾಡುತ್ತಾರೆ. ಒಬ್ಬರ ಹಿಂದೆ ಒಬ್ಬರು ಅಂತೆ ಸೂರ್ಯನ ನಂತರ ತಿಲಕ್, ಪಾಂಡ್ಯ, ಶೇಫರ್ಡ್ ಸಹ ತ್ತಮ ಬ್ಯಾಟಿಂಗ್ ಮಾಡುತ್ತಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಬೂಮ್ರಾ, ಪಿಯೂಷ್, ಪಾಂಡ್ಯ ಉತ್ತಮ ಲಯದಲ್ಲಿದ್ದಾರೆ.

ಲಖನೌಗೆ ರಾಜಸ್ಥಾನ್ ಸವಾಲು

ಇನ್ನು ಎರಡನೇ ಪಂದ್ಯದಲ್ಲಿ ಲಖನೌ ಹಾಗೂ ರಾಸ್ಥಾನದಲ್ಲಿ ನಡೆಯಲಿದೆ.ಸೂಪರ್ ಜೈಂಟ್ಸ್ ತನ್ನ ಹಿಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿತ್ತು. ಹೀಗಾಗಿ ಆತ್ಮವಿಶ್ವಾಸದಿಂದ ಸಾಗಲಿದೆ. ಮತ್ತೊಂದೆಡೆ, ರಾಜಸ್ಥಾನ್ ರಾಯಲ್ಸ್ ಆಡಿದ ಎಂಟು ಪಂದ್ಯಗಳಲ್ಲಿ ಏಳರಲ್ಲಿ ಗೆದ್ದಿದೆ ಮತ್ತು ಪ್ರಸ್ತುತ ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರಸ್ಥಾನದಲ್ಲಿದೆ.

ಕಳೆದ ಪಂದ್ಯದಲ್ಲಿ, ಲಖನೌ ತಂಡವು ದೊಡ್ಡ ಮೊತ್ತವನ್ನು

ಯಶಸ್ವಿಯಾಗಿ ಗೆದ್ದಿತು. ಬ್ಯಾಟಿಂಗ್ ವಿಭಾಗದಲ್ಲಿ ನಾಯಕ ಕೆ. ಎಲ್.ರಾಹುಲ್ ಭಾರಿ ಲಯದಲ್ಲಿ ಇದ್ದು, ತಂಡಕ್ಕೆ ಬಲ ತಂದಿದೆ. ಅವರೊಂದಿಗೆ ಡಿಕಾಕ್ ಸಹ ಲಯ ಕಂಡುಕೊಂಡಿದ್ದು, ಉತ್ತಮ ಆರಂಭ ಸಿಗಲಿಗೆ. ಹಿಂದಿನ ಪಂದ್ಯದಲ್ಲಿ ಮಿಂಚಿದ್ದ ಸ್ಟೋಯಿನಿಸ್ ಬರುಸಿನ ಆಟವಾಡುವ ಭರವಸೆ ಮುಡಿಸಿದ್ದಾರೆ. ಇನ್ನು ಪೂರಣ್ ಸಹ ದೊಡ್ಡ ಹೊಡೆತಗಳನ್ನು ಹೊಡೆಯುತ್ತಾರೆ. ಬೌಲಿಂಗ್ ವಿಭಾಗದಲ್ಲಿ ಉತ್ತಮ ಸಂಘಟನಾತ್ಮಕವಾಗಿ ಮಾಡುತ್ತಿದೆ. ಇನ್ನು ಬ್ಯಾಟಿಂಗ್ ಲೈನ್‌ಅಪ್ ಉತ್ತಮ ಸ್ಥಿತಿಯಲ್ಲಿರುವಂತೆ ತೋರುತ್ತಿದ್ದರೂ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ಬಲಿಷ್ಠ ಆರಂಭಿಕರಿದ್ದಾರೆ. ಜೈಸ್ವಾಲ್ ಲಯಕ್ಕೆ ಬಂದಿದ್ದು ತಂಡಕ್ಕೆ ಆನೆ ಬಲ ಬಂದಿದೆ. ಬಟ್ಲರ್, ಸಂಜು, ರಿಯಾನ್ ಸಹ ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಬೋಲ್ಟ್, ಚಾಹಲ್ ವಿಕೆಟ್ ಕಿತ್ತಿದ್ದಾರೆ.

ಪಿಚ್ ರಿಪೋರ್ಟ್

ಮೊದಲ ಪಂದ್ಯದೆಹಲಿಯ ರುಣ ಜೇಟ್ಲಿ ಕ್ರಿಡಾಂಗಣದಲ್ಲಿ ನಡೆಯಲಿದ್ದು, ರನ್ ಹೊಳೆ ಹರಿಯಲಿದೆ. ಡಿವ್ ಇರುವುದು ಮೊದಲು ಬೌಲಿಂಗ್ ಮಾಡುವುದು ಉತ್ತಮ ಆಯ್ಕೆ. ಇನ್ನು ಎರಡನೇ ಪಂದ್ಯ ಏಕನಾ ಕ್ರೀಡಾಂಗಣದಲ್ಲಿ ನಡೆಯಲಿದ್ದು, ವಿಕೆಟ್ ಬ್ಯಾಟಿಂಗ್ ಆರಂಭಕ್ಕೆ ಪ್ರಾರಂಭಿಸಲು ಕಠಿಣವಾಗಿರಬಹುದು. ಆದರೆ ಆಟವು ಮುಂದುವರಿದಂತೆ ಬ್ಯಾಟಿಂಗ್ ಪರಿಸ್ಥಿತಿಗಳು ಸುಧಾರಿಸುತ್ತವೆ. ಕೆಲವೊಮ್ಮೆ, ಚೆಂಡು ಬ್ಯಾಟರ್‌ಗಳ ನಿರೀಕ್ಷೆಗಿಂತ ವೇಗದಲ್ಲಿ ಪುಟಿದೇಳುತ್ತದೆ. ಸ್ಪಿನ್ನರ್ಗಳು ಈ ಸ್ಥಳದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ನೇರ ಬೌಂಡರಿಗಳು ದೂರವಿರುವುದರಿಂದ, ಬ್ಯಾಟರ್‌ಗಳಿಗೆ ಕಾಟಕೊಡಲಿದೆ.

ಅಮೆರಿಕ ವರದಿ ಪಕ್ಷಪಾತ: ಕೇಂದ್ರ

ಮಣಿಪುರ: ಇಲ್ಲಿ ನಡೆದ ಜನಾಂಗೀಯ ಸಂಘರ್ಷ ಶುರುವಾದ ನಂತರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿದೆ ಎಂದು ಅಮೆರಿಕ ಸರಕಾರದ ವರದಿಯೊಂದು ಹೇಳಿರುವುದು ತೀರಾ ಪಕ್ಷಪಾ ತದಿಂದ ಕೂಡಿದೆ ಎಂದು ಕೇಂದ್ರ ಸರಕಾರ ಗುರುವಾರ ಪ್ರತಿಕ್ರಿಯಿಸಿದೆ. ಇದು ಭಾರ ತದ ಬಗ್ಗೆ ಸರಿಯಾಗಿ ಅರಿ ಯದೆ ಸಿದ್ಧಪಡಿಸಿರುವ ವರದಿ ಯಾಗಿದ್ದು, ಇದಕ್ಕೆ ಬೆಲೆ ಇಲ್ಲ ಎಂದು ಸಹ ಕೇಂದ್ರ ಹೇಳಿದೆ. ಅಮೆರಿಕದ ವಿದೇಶಾಂಗ ಇಲಾಖೆಯು ಈ ವರದಿಯನ್ನು ಸಿದ್ಧಪಡಿಸಲಾಗಿದ್ದು, ಬ್ರಿಟಿಷ್ ಬ್ರಾಟ್ ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಕಚೇರಿಯ ಮೇಲೆ ಕೇಂದ್ರ ತೆರಿಗೆ ಅಧಿಕಾರಿಗಳು ನಡೆಸಿದ ದಾಳಿಯ ಕುರಿತೂ ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪಟಾಕಿ ಅವಘಡ ಆರು ಜನ ಸಾವು

ಬಿಹಾರ: ಇಲ್ಲಿನ ದರ್ಭಾಂಗಾದಲ್ಲಿ ಮದುವೆಯ ಸಂಭ್ರಮದಲ್ಲಿದ್ದ ಮನೆಯಲ್ಲಿ ಪಟಾಕಿ ಸಿಡಿಸುವ ವೇಳೆ ಮಂಟಪಕ್ಕೆ ಬೆಂಕಿ ಹೊತ್ತಿಕೊಂಡು, 6 ಜನರು ಮೃತಪಟ್ಟಿದ್ದಾರೆ. ಬಹೇರಾ ಪೊಲೀಸ್ ಠಾಣೆ ವ್ಯಾಪ್ತಿಯ ಅಲಿನಗರದಲ್ಲಿ ಗುರುವಾರ ರಾತ್ರಿ 11.15 ರ ಸುಮಾರಿಗೆ ಈ ಘಟನೆ ನಡೆದಿದ್ದು, ಸುನೀಲ್ ಪಾಸ್ವಾನ್ (26), ಲೀಲಾ ದೇವಿ (23), ಕಾಂಚನ ದೇವಿ (26), ಸಿದ್ದಾಂತ್ ಕುಮಾರ್ (4), ಶಶಾಂಕ್ ಕುಮಾರ್ (3) ಮತ್ತು ಸಾಕ್ಷಿ ಕುಮಾರಿ (5) ಎನ್ನುವವರು ಘಟನೆ ವೇಳೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಪಟಾಕಿ ಸಿಡಿಸುವ ವೇಳೆ ಮಂಟಪಕ್ಕೆ ಬೆಂಕಿ ಹೊತ್ತಿಕೊಂಡಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಭಾರತದೊಂದಿಗೆ ವ್ಯಾಪಾರ ಬೆಳೆಸಿ

ಇಸ್ಲಾಮಾಬಾದ್: ದೇಶದ ಆರ್ಥಿಕ ಪರಿಸ್ಥಿತಿ ಸುಸ್ಥಿತಿಗೆ ತರಲು ಭಾರತದೊಂದಿಗೆ ವ್ಯಾಪಾರ ಮಾತುಕತೆಗಳನ್ನು ಪ್ರಾರಂಭಿಸುವಂತೆ ಪಾಕಿಸ್ತಾನದ ಪ್ರಮುಖ ಉದ್ಯಮಿಗಳು ಪ್ರಧಾನಿ ಶಹಬಾಜ್ ಷರೀಫ್‌ಗೆ ಒತ್ತಾಯಿಸಿದ್ದಾರೆ. ಚುನಾವಣೆಯ ನಂತರ ಇದೇ ಮೊದಲ ಬಾರಿಗೆ ಕರಾಚಿಗೆ ಭೇಟಿ ನೀಡಿದ ಪ್ರಧಾನ ಷರೀಫ್, ಉದ್ಯಮಿಗಳೊಂದಿಗೆ ಸಂವಾದ ನಡೆಸಿದ್ದರು. ಈ ವೇಳೆ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಸಲಹೆಗಳನ್ನು ನೀಡುವಂತೆ ಉದ್ಯಮಿಗಳಿಗೆ ಕೇಳಿದ್ದು, ಆರ್ಥಿಕ ಸಮಸ್ಯೆಗಳನ್ನು ನಿಭಾಯಿಸಲು ಪ್ರಧಾನಿಯ ಸಂಕಲ್ಪವನ್ನು ಶ್ಲಾಘಿಸಿ ಉದ್ಯಮಿಗಳು, ನೆರೆಯ ರಾಷ್ಟ್ರದೊಂದಿಗೆ(ಭಾರತ) ವ್ಯಾಪಾರ ಸಂಬಂಧ ಪುನರ್ ಪ್ರಾರಂಭಿಸುವ ಕುರಿತು ಪ್ರಸ್ತಾಪಿಸಿದರು. ದೇಶದ ಆರ್ಥಿಕತೆಯನ್ನು ಸುಸ್ಥಿತಿಗೆ ತರಲು ರಾಜಕೀಯ ಸ್ಥಿರತೆ ಕಾಪಾಡಿಕೊಳ್ಳುವ ಅಗತ್ಯವಿದೆ ಎಂದು ಸಲಹೆ ನೀಡಿದರು. ಅಲ್ಲದೇ ರಫ್ತಿನ ಮೂಲಕ ಆರ್ಥಿಕತೆ ಮೇಲಕ್ಕೆತ್ತುವ ಪ್ರಧಾನಿ ಅವರ ಸಲಹೆಯನ್ನು ಉದ್ಯಮಿಗಳು ಅಸಾಧ್ಯ ಎಂದು ತಿಳಿಸಿದ್ದು, ಹೆಚ್ಚಿದ ಇಂಧನ ದರ, ಗೊಂದಲದಿಂದ ಕೂಡಿದ ಸರಕಾರಿ ನೀತಿಗಳಿಂದ ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲ ಎಂದು ಹೇಳಿದರು.

ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಿದ ಅಮೆರಿಕ

ವಾಷಿಂಗ್ಟನ್: ಬಹುದಿನಗಳಿಂದ ರಷ್ಯಾ ಹಾಗೂ ಉಕ್ರೇನ್ ನಡುವೆ ಯುದ್ಧ ನಡೆಯುತ್ತಿದ್ದು, ರಷ್ಯಾದ ಆಕ್ರಮಣದ ವಿರುದ್ಧ ಹೋರಾಟ ಮಾಡಲು ಉಕ್ರೇನ್‌ಗೆ ಅತ್ಯಗತ್ಯವಾದ ಶಸ್ತ್ರಾಸ್ತ್ರಗಳನ್ನು ಅಮೆರಿಕ ರವಾನಿಸಲು ಆರಂಭಿಸಿದೆ. ರಷ್ಯಾಗೆ ಚೀನಾ, ಇರಾನ್ ಮತ್ತು ಉತ್ತರ ಕೊರಿಯಾ ನೆರವು ನೀಡುತ್ತಿವೆ. ಹೀಗಾಗಿ, ನಾವು ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ರವಾನಿಸುತ್ತಿದ್ದೇವೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ. ಪುಟಿನ್ ಅವರ ಸ್ನೇಹಿತರು ಸಾಕಷ್ಟು ಪ್ರಮಾಣದ ಶಸ್ತ್ರಾಸ್ತ್ರಗಳನ್ನು ರಷ್ಯಾಗೆ ಪೂರೈಸುತ್ತಿದ್ದಾರೆ. ಈ ದೇಶಗಳ ಬೆಂಬಲದಿಂದ ಉಕ್ರೇನ್ ನಗರಗಳ ಮೇಲೆ ದಾಳಿಯನ್ನು ರಷ್ಯಾ ತೀವ್ರಗೊಳಿಸಿದೆ. ಆದ್ದರಿಂದ, ಈ ದಾಳಿಯನ್ನು ಎದುರಿಸಲು ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಕಳಿಸುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ.

ಜಮ್ಮು-ಕಾಶ್ಮೀರ: ಇಬ್ಬರು ಉಗ್ರರ ಬೇಟೆ

ಜಮ್ಮು ಮತ್ತು ಕಾಶ್ಮೀರ: ಇಲ್ಲಿನ ಬಾರಾಮುಲ್ಲಾ ಜಿಲ್ಲೆಯಲ್ಲಿ ಉಗ್ರರು ಹಾಗೂ ಭಾರತೀಯ ಯೋಧರ ನಡುವೆ ಕಾಳಗ ಮುಂದುವರಿದಿದ್ದು, ಶುಕ್ರವಾರ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಇಬ್ಬರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಕಾಶ್ಮೀರದ ಸೋಪೋರ್ ಪ್ರದೇಶದ ನೌಪೋರಾದಲ್ಲಿ ಗುರುವಾರ ಕಾರ್ಯಾಚರಣೆ ನಡೆಸಲಾಗಿತ್ತು. ಶುಕ್ರವಾರ ಮುಂಜಾನೆ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಮತ್ತೆ ಗುಂಡಿನ ಚಕಮಕಿ ನಡೆದಿದೆ ಎಂದು ಅವರು ಹೇಳಿದ್ದಾರೆ. ಗುಂಡಿನ ಚಕಮಕಿಯಲ್ಲಿ ಗಾಯಗೊಂಡ ಇಬ್ಬರು ಸೇನಾ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಪೋರ್ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಗುರುವಾರ ನಡೆದ ಎನ್ಕೌಂಟರ್‌ನಲ್ಲಿ ಸಮೀಪದ ನಾಗರಿಕರೊಬ್ಬರು ಗಾಯಗೊಂಡಿದ್ದು, ಎನ್ಕೌಂಟರ್ ನಡೆದ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ ಸೇನೆಯಲ್ಲಿದ್ದ ಭಾರತೀಯರು ವಾಪಾಸ್

ರಷ್ಯಾ: ಇಲ್ಲಿನ ಸೇನಾಪಡೆಯಲ್ಲಿ ಕೆಲಸ ಮಾಡುತ್ತಿದ್ದ 10 ಭಾರತೀಯರ ಬಿಡುಗಡೆಯಾಗಿದ್ದು, ಅವರು ಭಾರತಕ್ಕೆ ಮರಳುತ್ತಿದ್ದಾರೆ. ಸೇನೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯರು ಮರಳುತ್ತಿರುವುದನ್ನು ರಷ್ಯಾ ಖಚಿತಪಡಿಸಿದೆ ಎಂದು ಭಾರತೀಯ ವಿದೇಶಾಂಗ ಇಲಾಖೆಯ ವಕ್ತಾರ ರಣ್ಧೀರ್ ಜೈಸ್ವಾಲ್ ಗುರುವಾರ ತಿಳಿಸಿದ್ದಾರೆ.

ಕಳೆದ ತಿಂಗಳು ರಷ್ಯಾನ್ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಭಾರತೀಯರು ಮೃತಪಟ್ಟಿದ್ದರು. ಈ ಬಳಿಕ ಭಾರತವು, ಜೀವಕ್ಕೆ ಅಪಾಯ ತಂದೊಡ್ಡುವ ಕೆಲಸಕ್ಕೆ ಸೇರದಂತೆ ಎಚ್ಚರಿಕೆ ನೀಡಿತ್ತು. ರಷ್ಯಾ ಸೇನೆಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಭಾರತೀಯರ ಬಗ್ಗೆಯೂ ಗಮನಹರಿಸಲಾಗಿದೆ. ಭಾರತಕ್ಕೆ ಮರಳಲು ಇಚ್ಚಿಸುವವರ ಜೊತೆ ಸಂಪರ್ಕ ಸಾಧಿಸಲಾಗಿದ್ದು, ಅವರನ್ನು ಕರೆತರಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಜೈಸ್ವಾಲ್ ತಿಳಿಸಿದರು. ಕಳೆದ ವರ್ಷದಿಂದ ಈವರೆಗೆ 200 ಭಾರತೀಯರು ರಷ್ಯಾದ ಸೇನೆಯ ಸಹಾಯಕರಾಗಿ ಸೇರಿಕೊಂಡಿದ್ದಾರೆ ಎಮದು ವರದಿಯೊಂದು ತಿಳಿಸಿದೆ.

ನ್ಯಾಯಾಲಯಕ್ಕೆ ಹಾಜರಾದ ಪ್ರಜ್ಞಾ

ದೆಹಲಿ: ಮುಂಬಯಿನಲ್ಲಿ ನಡೆದಿದ್ದ ಮಾಲೆಗಾಂವ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಪ್ರಜ್ಞಾ ಠಾಕೂರ್ ಎನ್ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಹೇಳಿಕೆಯನ್ನು ದಾಖಲಿಸಿದ್ದಾರೆ. ಈ ಹಿಂದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವಾರು ಬಾರಿ ಎಚ್ಚರಿಕೆ ನೀಡಿದರೂ, ವಿಚಾರಣೆಗೆ ಪ್ರಜ್ಞಾ ಠಾಕೂರ್ ಹಾಜರಾಗಿರಲಿಲ್ಲ. ಹೀಗಾಗಿ ಅವರ ವಿರುದ್ಧ ವಾರೆಂಟ್ ಸಹ ಹೊರಡಿಸಲಾಗಿತ್ತು. ಗುರುವಾರ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಹೇಳಿಕೆಯನ್ನು ದಾಖಲಿಸಿದ್ದು, ಪ್ರಕರಣದ ವಿಚಾರಣೆ ಅಂತಿಮ ಹಂತದಲ್ಲಿದೆ ಎಂದು ಎನ್ಐಎ ಅಧಿಕಾರಿಗಳು ಹೇಳಿದ್ದಾರೆ. ಯುಎಪಿಎ ಅಡಿಯಲ್ಲಿ ಪ್ರಜ್ಞಾ ಠಾಕೂರ್ ಹಾಗೂ ಇತರೆ ಆರು ಮಂದಿ ಸ್ಫೋಟ ಪ್ರಕರಣದಲ್ಲಿ ವಿಚಾರಣೆ ಎದುರಿಸುತ್ತಿದ್ದು, ಎನ್ಐಎ ನ್ಯಾಯಾಲಯವು ಆರೋಪಿಗಳ ಹೇಳಿಕೆಗಳನ್ನು ಅಪರಾಧ ಪ್ರಕ್ರಿಯಾ ಸಂಹಿತೆಯಡಿ ದಾಖಲಿಸಿಕೊಳ್ಳುತ್ತಿದೆ. 2008ರ ಸೆಪ್ಟೆಂಬರ್ 29ರಂದು ನಾಸಿಕ್ ಜಿಲ್ಲೆಯ ಮಾಲೆಗಾಂವ್ ಪಟ್ಟಣದ ಮಸೀದಿಯೊಂದರ ಸಮೀಪ ಸ್ಫೋಟ ನಡೆದಿತ್ತು. ಈ ವೇಳೆ ಆರು ಜನರು ಮೃತಪಟ್ಟು ಹಲವರು ಗಾಯಗೊಂಡಿದ್ದರು.

ಸ್ತ್ರೀಧನ ಪತಿ ಜತೆಗಿನ ಜಂಟಿ ಆಸ್ತಿಯಲ್ಲ

ಅದು ಮಹಿಳೆಯ ಆಸ್ತಿ, ತನಗೆ ಇಷ್ಟಬಂದಂತೆ ಬಳಸಿಕೊಳ್ಳಬಹುದು

ದೆಹಲಿ: ಸ್ತ್ರೀಧನವು ಮಹಿಳೆಯ ಆಸ್ತಿಯಾಗಿದ್ದು, ಅದರ ಮೇಲೆ ಆಕೆಗೆ ಹಕ್ಕಿದೆ ಹೀಗಾಗಿ ಅದನ್ನು ಆಕೆ ತನಗೆ ಇಷ್ಟಬಂದಂತೆ ಬಳಸಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸ್ತ್ರೀಧನವು ಎಂದಿಗೂ ಪತಿಯ ಜೊತೆಗಿನ ಜಂಟಿ ಆಸ್ತಿ ಆಗಲ್ಲ. ಅದನ್ನು ಪತಿಯು ಕಷ್ಟದ ಪರಿಸ್ಥಿತಿಗಳಲ್ಲಿ ಬಳಕೆ ಮಾಡಿಕೊಳ್ಳಬಹುದು. ಆದರೆ ಆ ಆಸ್ತಿಯನ್ನು ಪತ್ನಿಗೆ ಹಿಂದಿರುಗಿಸುವ ನೈತಿಕ ಹೊಣೆ ಪತಿಗೆ ಇದೆ ಎಂದು ಕೂಡ ಕೋರ್ಟ್ ಸ್ಪಷ್ಟಪಡಿಸಿದೆ.

ಏನಿದು ಪ್ರಕರಣ?

ಸುಪ್ರೀಂನಲ್ಲಿ ನಡೆದ ಪ್ರಕರಣ ಒಂದರಲ್ಲಿ ಮಹಿಳೆಯು, ಮದುವೆಯ ಸಂದರ್ಭದಲ್ಲಿ 89 ಸವರನ್ ಚಿನ್ನವನ್ನು ನನ್ನ ತವರಿನ ಕಡೆಯವರು ನನಗೆ ಉಡುಗೊರೆಯಾಗಿ ನೀಡಿದ್ದರು. ಅಲ್ಲದೆ, ಮದುವೆಯ ನಂತರದಲ್ಲಿ ನನ್ನ ತಂದೆಯು ₹2 ಲಕ್ಷ ಮೌಲ್ಯದ ಚೆಕ್‌ಅನ್ನು ಪತಿಗೆ ನೀಡಿದ್ದರು ಎಂದು ಹೇಳಿದ್ದರು. ಪತಿಯು ಎಲ್ಲ ಚಿನ್ನಾಭರಣಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡ. ಅವುಗಳನ್ನು ಸುರಕ್ಷಿತವಾಗಿ ಇರಿಸುವ ಹೆಸರಿನಲ್ಲಿ ತನ್ನ ತಾಯಿಗೆ ಹಸ್ತಾಂತರಿಸಿದ. ಪತಿ ಮತ್ತು ಆತನ ತಾಯಿ ತಮ್ಮ ಹಳೆಯ ಹಣಕಾಸಿನ ಹೊರೆಗಳನ್ನು ಇಳಿಸಿಕೊಳ್ಳಲು ಆ ಚಿನ್ನಾಭರಣಗಳನ್ನು ದುರ್ಬಳಕೆ ಮಾಡಿಕೊಂಡರು ಎಂಬುದು ಮಹಿಳೆಯ ಆರೋಪ.

ಸ್ತ್ರೀಧನವು ಮಹಿಳೆಯ ಆಸ್ತಿಯಾಗಿದ್ದು, ಪತ್ನಿಯ ಅಷ್ಟೂ ಚಿನ್ನಾಭರಣಗಳನ್ನು ತೆಗೆದುಕೊಂಡಿದ್ದ ಪತಿಯು, ಪತ್ನಿಗೆ ಹಣಕಾಸಿನ ಪರಿಹಾರದ ರೂಪದಲ್ಲಿ ₹25 ಲಕ್ಷ ಪಾವತಿಸಬೇಕು ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇದ್ದ ವಿಭಾಗೀಯ ಪೀಠವು ಸೂಚಿಸಿದೆ.

ಅಮೆರಿಕದ ಭಾರತೀಯ ವಿದ್ಯಾರ್ಥಿಗಳು ಸೇಫ್

ನಮ್ಮ ದೇಶದಲ್ಲಿ ಇರುವವರೆಗೂ ಅವರು ನಮ್ಮ ಮಕ್ಕಳು: ಎರಿಕ್ ಗಾರ್ಸೆಟ್ಟಿ

ದೆಹಲಿ: ಅಮೆರಿಕವು ಭಾರತೀಯ ವಿದ್ಯಾರ್ಥಿಗಳಿಗೆ ಸುರಕ್ಷಿತ ದೇಶವಾಗಿದೆ. ನಮ್ಮ ದೇಶದಲ್ಲಿ ಇರುವವರೆಗೆ ಅವರು ನಮ್ಮ ಮಕ್ಕಳಾಗಿರುತ್ತಾರೆ, ಅವರ ಯೋಗಕ್ಷೇಮದ ಬಗ್ಗೆ ಕಾಳಜಿವಹಿಸಲಾಗುತ್ತದೆ ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಹೇಳಿದರು.

ಪಿಟಿಐ ಸಂದರ್ಶನದ ವೇಳೆ ಮಾತನಾಡಿದ ಅವರು, ಅಮೆರಿಕದಲ್ಲಿ ವಿದ್ಯಾರ್ಥಿಗಳ ಉನ್ನತಿಗೆ ಸಹಾಯ ಮಾಡುವ ಸಂಪನ್ಮೂಲಗಳಿವೆ. ಮನೆ, ಪೋಷಕರು ಮತ್ತು ಕುಟುಂಬಗಳಿಗೆ ದೂರದಲ್ಲಿರುವ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಹಾಗೂ ಇನ್ನಿತರ ಮೂಲಸೌಕರ್ಯ ಒದಗಿಸಲಾಗುತ್ತದೆ ಎಂದು ಉತ್ತರಿಸಿದರು. ವಿದೇಶದಲ್ಲಿ ಓದುವ ವಿದ್ಯಾರ್ಥಿಗಳು ಉತ್ತಮ ಸಂಪರ್ಕ, ನಂಬಿಕಸ್ತ ಸ್ನೇಹಿತರನ್ನು ಗಳಿಸುತ್ತಾರೆ. ಅಲ್ಲದೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಮತ್ತು ಅಪಾಯದ ಸಂದರ್ಭದಲ್ಲಿ ಏನು ಮಾಡಬೇಕೆಂಬುದನ್ನು ಕಲಿತುಕೊಳ್ಳುತ್ತಾರೆ' ಎಂದರು.

> **ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷಿತವಾಗಿರುವ ಸಮಸ್ಯೆ ಹಾಗೂ ಗೊಂದಲ ಯಾವುದೇ ಹೊಸ ದೇಶಕ್ಕೆ ಹೋದಾಗ ಎದುರಾಗುವುದು ಸಹಜ. ರಾತ್ರಿ ನಂತರ ಯಾವ ಸಮಯದಲ್ಲಿ ಓಡಾಡಿದರೆ ಸುರಕ್ಷಿತ ಎಂಬುದು ಗೊತ್ತಿಲ್ಲದಿರಬಹುದು. ಹೀಗಾಗಿ ಅಮೆರಿಕಕ್ಕೆ ಬರುವ ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿರುವ ಭದ್ರತೆಗಳ ಕುರಿತು ಹಾಗೂ ಸ್ಥಳೀಯವಾಗಿ ಜಾರಿಯಲ್ಲಿರುವ ಕಾನೂನುಗಳ ಬಗ್ಗೆ ತಿಳಿದುಕೊಳ್ಳಬೇಕು. ಅದೇ ರೀತಿ ಯಾವೆಲ್ಲಾ ಸಂಪನ್ಮೂಲಗಳಿವೆ ಎಂಬುದರ ಬಗ್ಗೆ ಅರಿತಿರಬೇಕು.**
> -ಎರಿಕ್ ಗಾರ್ಸೆಟ್ಟಿ ಅಮೆರಿಕ ರಾಯಭಾರಿ

ಸಲ್ಮಾನ್ ಪ್ರಕರಣ: ಕಸ್ಟಡಿಗೆ ಇಬ್ಬರು ಆರೋಪಿಗಳು

ಬಂಧಿಸಲಾಗಿದ್ದ ಇಬ್ಬರು ಆರೋಪಿಗಳನ್ನು ಏ.30ರವರೆಗೆ ಪೋಲಿಸರಿಗೆ ಒಪ್ಪಿಸಿದ ಹೈ

ಮುಂಬಯಿ: ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಹೊರಗೆ ನಡೆದಿದ್ದ ಗುಂಡಿನ ದಾಳಿ ಪ್ರಕರಣ ಸಂಬಂಧಿಸಿದಂತೆ ಪಂಜಾಬ್‌ನಲ್ಲಿ ಬಂಧಿಸಲಾಗಿದ್ದ ಇಬ್ಬರು ಆರೋಪಿಗಳನ್ನು ಮುಂಬಯಿ ಕೋರ್ಟ್ 30ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸುಭಾಷ್ ಚಂದರ್ (37) ಮತ್ತು ಅನೂಜ್ ತಪನ್ (32) ಅವರನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈಗಾಗಲೇ ಬಂಧಿಸಲಾಗಿರುವ ಸಾಗರ್ ಪಾಲ್ (21) ಮತ್ತು ವಿಕ್ಕಿ ಗುಪ್ತಾಗೆ (24) ಪಿಸ್ತೂಲ್‌ಗಳು ಮತ್ತು ಗುಂಡುಗಳನ್ನು ಪೂರೈಸಿರುವ ಆರೋಪದ ಮೇರೆಗೆ ಈ ಆರೋಪಿಗಳನ್ನು ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದರು.

ಪ್ರಮುಖ ಆರೋಪಿಗಳಾಗಿರುವ ಇಬ್ಬರನ್ನು ತಾಂತ್ರಿಕ ಸಾಕ್ಷ್ಯ ಆಧರಿಸಿ ಬಂಧಿಸಲಾಗಿದೆ. ಶಸ್ತ್ರಾಸ್ತ್ರಗಳನ್ನು ಪೂರೈಸಿದವರ ಪತ್ತೆಗಾಗಿ ಇವರನ್ನೂ ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕಿದೆ ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದರು.

ಬಿಷ್ಣೋಯ್ ಬ್ರದರ್ಸ್‌ಗೂ ಲಿಂಕ್

ದೇಶಿ ನಿರ್ಮಿತ ಎರಡು ಪಿಸ್ತೂಲ್‌ಗಳು ಮತ್ತು 38 ಗುಂಡುಗಳನ್ನು ಸಾಗರ್ ಪಾಲ್ ಮತ್ತು ವಿಕ್ಕಿ ಗುಪ್ತಾಗೆ ತಲುಪಿಸಲು ಚಂದರ್ ಮತ್ತು ತಪನ್ ಮಾ.15ರಂದು ಮುಂಬಯಿ ಸಮೀಪದ ರಾಯಗಢ ಜಿಲ್ಲೆ ಪನ್ವೆಲ್‌ಗೆ ಬಂದಿದ್ದರು ಎಂದು ಪೊಲೀಸರು ಆರೋಪಿಸಿದ್ದಾರೆ. ಈ ನಾಲ್ವರು ಆರೋಪಿಗಳಲ್ಲದೆ, ಜೈಲಿನಲ್ಲಿರುವ ಪಾತಕಿ ಲಾರೆನ್ಸ್ ಬಿಷ್ಣೋಯ್ ಮತ್ತು ಆತನ ಕಿರಿಯ ಸಹೋದರ ಅನ್ಮೋಲ್ ಬಿಷ್ಣೋಯ್ ಅವರನ್ನು ಈ ಪ್ರಕರಣದಲ್ಲಿ ಬೇಕಾಗಿರುವ ಮತ್ತಿಬ್ಬರು ಪ್ರಮುಖ ಆರೋಪಿಗಳೆಂದು ಪೊಲೀಸರು ಘೋಷಿಸಿದ್ದಾರೆ.

ಸಂದೇಶ್‌ಖಾಲಿ: ಶಸ್ತ್ರಾಸ್ತ್ರ ವಶಕ್ಕೆ

ದೆಹಲಿ: ಟಿಎಂಸಿ ನಾಯಕ ಶಹಜಹಾನ್ ಶೇಖ್ ಹಾಗೂ ಆತನ ಬೆಂಬಲಿಗರು ಇ.ಡಿ ಅಧಿಕಾರಿಗಳ ಮೇಲೆ ದಾಳಿ ನಡೆಸಿದ ಪ್ರಕರಣ ಸಂಬಂಧ ಸಿಬಿಐ ಶುಕ್ರವಾರ ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯ ಹಲವು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದು, ವಿದೇಶಿ ನಿರ್ಮಿತ ಪಿಸ್ತೂಲ್ ಸೇರಿದಂತೆ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಡಿತರ ವಿತರಣೆ ಹಗರಣಕ್ಕೆ ಸಂಬಂಧಿಸಿದಂತೆ ಶೇಖ್ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಜ.5ರಂದು ಶೋಧ ಕೈಗೊಂಡಿದ್ದರು. ಆ ವೇಳೆ ಶೇಖ್ ಬೆಂಬಲಿಗರು ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ದಾಳಿಯಲ್ಲಿ ಮೂವರು ಅಧಿಕಾರಿಗಳು ಗಾಯಗೊಂಡಿದ್ದರು. ಪ್ರಕರಣ ಸಂಬಂಧ ಶುಕ್ರವಾರ ಬೆಳಗ್ಗೆ ಸಿಬಿಐ ತಂಡ ಶೋಧ ಕಾರ್ಯಾಚರಣೆ ಆರಂಭಿಸಿದೆ. ವಿದೇಶಿ ನಿರ್ಮಿತ ಪಿಸ್ತೂಲ್ ಸೇರಿದಂತೆ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟಿಬೆಟ್, ಚೀನಾ ನಡುವೆ ಔಪಚಾರಿಕ ಮಾತುಕತೆ

ಧರ್ಮಶಾಲಾ: ಟಿಬೆಟ್‌ನಲ್ಲಿ ಚೀನಾ ವಿರೋಧಿ ಪ್ರತಿಭಟನೆ ಮತ್ತು ಬೀಜಿಂಗ್‌ನ ಧೋರಣೆಯಿಂದಾಗಿ ಔಪಚಾರಿಕ ಮಾತುಕತೆಗಳು ಸ್ಥಗಿತಗೊಂಡಿದ್ದ ದಶಕದ ನಂತರ ಟಿಬೆಟ್‌ನ ದೇಶಾಂತರ ಸರಕಾರ ಮತ್ತು ಚೀನಾ ನಡುವೆ ಮತ್ತೆ ಔಪಚಾರಿಕ ಮಾತುಕತೆಯನ್ನು ಪುನರಾರಂಭಿಸುವ ಇಚ್ಛೆ ವ್ಯಕ್ತವಾಗಿದೆ ಎಂದು ವರದಿಯಾಗಿದೆ.

ಬೀಜಿಂಗ್‌ನಲ್ಲಿ ಆ ದೇಶದ ನಾಯಕ ರೊಂದಿಗೆ ಮಾತುಕತೆ ನಡೆಸಲು ನಾನು ಸಂಧಾನಕಾರರನ್ನು ನೇಮಿಸಿದ್ದೇನೆ. ಬೇರೆಯವರೂ ಈ ನಿಟ್ಟನಲ್ಲೂ ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಟಿಬೆಟ್ ಆಡಳಿತದ (ಸಿಟಿಎ) ಮುಖ್ಯಸ್ಥ ಸೆರಿಂಗ್ ಹೇಳಿದ್ದಾರೆ. 2020ರಲ್ಲಿ ಪೂರ್ವ ಲಡಾಖ್‌ನಲ್ಲಿ ಉದ್ಭವಿಸಿದ ವಿವಾದದ ನಂತರ ಭಾರತ ಮತ್ತು ಚೀನಾ ನಡುವೆ ಮೂಡಿರುವ ಬಿರುಕಿನ ಸಂಬಂಧ ಉಲ್ಲೇಖಿಸಿದರು

> **ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಸಂಧಾನಕಾರರು ಮಾತುಕತೆಯಲ್ಲಿ ತೊಡಗಿದ್ದು, ತಕ್ಷಣಕ್ಕೆ ಫಲಿತಾಂಶ ನೀಡುತ್ತದೆ ಎನ್ನುವ ನಿರೀಕ್ಷೆ ಇಲ್ಲ. ನಾವು ಕಳೆದ ವರ್ಷದಿಂದ ಅನೌಪಚಾರಿಕ ಮಾತುಕತೆಯಲ್ಲಿ ನಿರತವಾಗಿದ್ದೇವೆ. ಆದರೆ, ಇದರ ಮೇಲೆ ನಮಗೆ ಯಾವುದೇ ತಕ್ಷಣದ ನಿರೀಕ್ಷೆಗಳಿಲ್ಲ. ಈ ಪ್ರಯತ್ನ ದೀರ್ಘಾವಧಿಯಲ್ಲಿ ಫಲಿಸಬಹುದು.**
> -ಪೆನ್ಪಾ ಸೆರಿಂಗ್ ಟಿಬೆಟ್ ರಾಜಕೀಯ ಮುಖ್ಯಸ್ಥ